## ನೈಜ ಕಥೆ

ಝೀ ಕನ್ನಡದ 'ಬ್ರಹ್ಮ ಗಂಟು' ತುಂಬಾ ಚೆನ್ನಾಗಿ ಬರುತ್ತಿದೆ. ಅದರಲ್ಲಿನ ಪ್ರತಿ ಪಾತ್ರವೂ ನಿತ್ಯ ಜೀವನಕ್ಕೆ ಹತ್ತಿರವಾಗುತ್ತವೆ. ಹಾಗಾಗಿ ನೈಜತೆಯನ್ನು ಬಿಂಬಿಸುತ್ತದೆ. ಆರ್.ಜೆ. ಜನು ಅಂದರೆ ಗೀತಾಗೆ ವರ್ಷದ ಅವಾರ್ಡ್ ಪ್ರದಾನ ಮಾಡಿದ ಕಂತು ತುಂಬಾ ಚೆನ್ನಾಗಿ ಬಂತು. ನಾವೂ ಆ ಸಮಾರಂಭದಲ್ಲಿ ಭಾಗವಹಿಸಿದಷ್ಟೇ ಖುಷಿಯ ಅನುಭವವನ್ನು ಅದು ನೀಡಿತು. ಆ ಸಂದರ್ಭದಲ್ಲಿ ಗೀತಾಳ ಮಾವ ನಾಗಾಭರಣ, ಅತ್ತಿಗೆಯಾದ ಮಂಗಳಾ ಅವರು ಇಲ್ಲದೆ ಇರುವುದು ಭಣ ಭಣ ಎನಿಸಿತು.

ಹೃದಯವಂತಿಕೆ ಹೊಂದಿದ ಅತ್ತೆ–ಮಾವ ಒಟ್ಟಾರೆ ಕುಟುಂಬದ ಎಲ್ಲ ಸದಸ್ಯರು, ಸಂತೋಷದಿಂದ ಖುಷಿಪಡುವ ಇಂಥ ಸನ್ನಿವೇಶಗಳು, ಕೌಟುಂಬಿಕ ವಾತಾವರಣವನ್ನೂ ಹಿತಗೊಳಿಸುತ್ತವೆ.

—ಮೇಘನಾ ಜಹಗೀರದಾರ್, ಧಾರವಾಡ

## ಹಾಸ್ಯದ ರಸದೌತಣ

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು'ನಲ್ಲಿ ಕಬಡ್ಡಿ ಪಂದ್ಯ ನೋಡಿ ಹೊಟ್ಟೆ ಹುಣ್ಣಾಗುವಂತೆ ನಕ್ಕಾಯ್ತು. ಒಂದು ಆಟಕ್ಕೆ ಈ ರೀತಿಯಲ್ಲಿ ಹಾಸ್ಯ ರೂಪವನ್ನು ಕೊಟ್ಟು ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲುವಂತೆ ಮಾಡಬಹುದೆಂದು ಸಾಬೀತು ಪಡಿಸಿದರು. ಕುಡುಕನ ತಂಡದವರ ಅಭಿನಯ ಅದ್ಭುತವಾಗಿತ್ತು. ರೇಡ್ ಮಾಡಲು ಹೋದವ ವೇದಿಕೆಯ ಒಂದು ಕಡೆಯಿಂದ ಇಳಿದು ಮತ್ತೊಂದು ಕಡೆಯಿಂದ ಹತ್ತಿ ಬಂದು ವಿಜಯೋತ್ಸವ ಆಚರಿಸುವುದು, ಮತ್ತೊಬ್ಬ ವೇದಿಕೆಯ ಹಿಂಬದಿಗೆ ಹೋಗಿ ಮತ್ತೊಂದು ಕಡೆಯಿಂದ ಬಂದು ಸೇರಿ ಅದನ್ನೇ ವಿಜಯೋತ್ಸವ ಎಂದು ಕುಣಿದಾಡುವುದು. ಆ ಪರಿಕಲ್ಪನೆ, ವೇದಿಕೆಯ ಮೇಲೆ ಪ್ರಸ್ತುತಪಡಿಸುವಿಕೆ, ಹಾಸ್ಯಭರಿತ ಅಭಿನಯ ಎಲ್ಲವೂ ಮಿಳಿತವಾಗಿ ಹಾಸ್ಯ ರಸ ಉಕ್ಕಿ ಹರಿಯಿತು. ಇಂತಹ ಹಾಸ್ಯ ಭರಿತ ಕಾರ್ಯಕ್ರಮಗಳು ಹೆಚ್ಚು ಪ್ರಸಾರವಾಗಲಿ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಪಾಚೊ ಬೇಕು

ಕಲರ್ಸ್‌ನ 'ಪಾಪ ಪಾಂಡು'ನ ಶ್ರೀಮತಿ ಎಲ್ಲಿ? ಬಹಳ ದಿನಗಳಿಂದ ಕಾಣುತ್ತಿಲ್ಲ. ಅವರಿಲ್ಲದ ಧಾರಾವಾಹಿ ಸಪ್ಪೆ ಸಪ್ಪೆ. ಆದಷ್ಟು ಬೇಗ ಅವರನ್ನು ವಾಪಸ್ ಕರೆತರಲು 'ಸಿಹಿ ಕಹಿ'ಗೆ ಮನವಿ.

—ಅರುಣ್ ಕೆ.ಎನ್. ಬೆಂಗಳೂರು

## ಇದು ದಾಖಲೆ

'ಜೊತೆ ಜೊತೆಯಲಿ'ಯ ಆರ್ಯವರ್ಧನ್ ದಾಖಲೆಯ ದಾಪುಗಾಲಿಡುತ್ತಿದ್ದಾನೆ. ಉತ್ತಮ ಕಥೆ, ಸಂಭಾಷಣೆ, ಸಂಗೀತ, ಕಲಾವಿದರ ಚೇತೋಹಾರಿ ಭಾವ ಪ್ರದರ್ಶನ, ಎಲ್ಲಕ್ಕೂ ಮಿಗಿಲಾಗಿ ಹೇಳಿದ್ದನ್ನೇ ಹೇಳುತ್ತಾ ತೋರಿದ್ದನ್ನೇ ತೋರಿಸು ಸರ್ಕಸ್ ಇಲ್ಲದಿರುವುದಕ್ಕೆ ವೀಕ್ಷಕರು ಫಿದಾ ಆಗಿದ್ದಾರೆ. ಪೇಲವ ಧಾರಾವಾಹಿಗಳಲ್ಲಿ ಕಳೆದು ಹೋಗುತ್ತಿದ್ದ ಪತ್ನಿಗೆ ಹೀಗಳೆಯುತ್ತಿದ್ದ ನಾನು ಈಗ ರಾತ್ರಿ 8.30ಕ್ಕೆ ಮೂರ್ಖರ ಪೆಟ್ಟಿಗೆಯೆದುರು ಪತ್ನಿಯೊಂದಿಗೆ ಜೊತೆ ಜೊತೆಯಲಿ ಕುಳಿತು ಆರ್ಯವರ್ಧನ್ ಅಲಿಯಾಸ್ ಅನಿರುದ್ಧರನ್ನು ಸ್ವಾಗತಿಸುತ್ತಿದ್ದೇನೆ.

—ಕೆ. ಶ್ರೀನಿವಾಸರಾವ್ ಹರಪನಹಳ್ಳಿ

## ಹಳಿ ತಪ್ಪಿದ ಉಗಿಬಂಡಿ

ಮನೆಮಂದಿಯೆಲ್ಲ ಒಟ್ಟಿಗೆ ಕುಳಿತು ನೋಡುವ ಕಾರ್ಯಕ್ರಮಗಳು ಕೆಲವೇ ಕೆಲವು. ಇಷ್ಟಪಟ್ಟು ಅಲ್ಲದಿದ್ದರೂ ಹೊತ್ತು ಕಳೆಯಲು ಕಲರ್ಸ್‌ನ 'ಬಿಗ್‌ಬಾಸ್' ಹಾಕಿಕೊಂಡು ಕೂರುತ್ತೇವೆ. ಇದೇನು ಪ್ರೀತಿ ಪ್ರೇಮದ ಕಾರ್ಯಕ್ರಮವೋ ಅಥವಾ ನಾಯಿಯಂತೆ ಕಚ್ಚಾಡುವ ಕಾರ್ಯಕ್ರಮವೋ ಎಂಬ ಅನುಮಾನ ಬರುತ್ತಿದೆ.

ಹುಡುಗ, ಹುಡುಗಿ ಎಂಬ ಬೇಧಭಾವ ವಿಲ್ಲದ ಬಹಿರಂಗ ವರ್ತನೆಗಳು ಜುಗುಪ್ಸೆ ಹುಟ್ಟಿಸುತ್ತಿವೆ. ಹುಡುಗಿಯರು ಹುಡುಗರ ಎದೆಗೆ ರಾಜಾರೋಷವಾಗಿ ಒರಗಿಸಿಕೊಳ್ಳುವುದು, ಅವರ ತೊಡೆಯ ಮೇಲೆ ಮಲಗಿಸಿಕೊಳ್ಳುವುದು, ಒಬ್ಬರಿಗೊಬ್ಬರು ತಲೆಯನ್ನು ಮಸಾಜ್ ಮಾಡುವುದು, ಗಳಿಗೆಗೊಮ್ಮೆ ಅಪ್ಪಿಕೊಳ್ಳುವುದು, ಇನ್ನು ಅವರ ಡ್ರೆಸ್‌ಗಳನ್ನು ನೋಡಲಾಗದೆ ನಾವೇ ಕಣ್ಣು ಮುಚ್ಚಿಕೊಳ್ಳಬೇಕು. ಇದೆಲ್ಲಾ ಪೂರ್ವಭಾವಿ ತಯಾರಿಯೋ ಅಥವಾ ನೈಜವೋ ಅದನ್ನು ಬಿಗ್ ಬಾಸ್ ಹೇಳಬೇಕು. ಹತೋಟಿ ಇಲ್ಲದ ಈ ಕಾರ್ಯಕ್ರಮ ಈಗ ಹಳಿ ತಪ್ಪಿದ ಉಗಿಬಂಡಿಯಂತಾಗಿದೆ.

—ಪುಷ್ಪ ಎನ್ ಕೆ ರಾವ್ ಉಡುಪಿ

## ದುರಹಂಕಾರ

ಕಲರ್ಸ್‌ನ 'ಬಿಗ್‌ಬಾಸ್' ಶಯ್ನ್ ಶೆಟ್ಟರು ಟಾಸ್ಕ್ ಒಂದರಲ್ಲಿ ಅತಿ ಕೀಳುಮಟ್ಟದ ಆಟವಾಡಿ ತಮ್ಮ ಮುಖಕ್ಕೆ ಮಸಿ ಬಳಿದುಕೊಂಡಿದ್ದರು. ಕಿಶನ್ ಹಾಗೂ ಶಯ್ನ್ ಕೈಯನ್ನು ಹಿಂದೆ ಕಟ್ಟಿಕೊಂಡು ತಳ್ಳುವ ಟಾಸ್ಕ್ ನಲ್ಲಿ ಶಯ್ನ್ ಮೈ ಮರೆತು ನಿಂತಿದ್ದಾಗ ಕಿಶನ್ ಭುಜದಿಂದ ತಳ್ಳಿ ಹೊರಗೆ ಹಾಕಿದರು ತಕ್ಷಣ ಅವಮಾನದಿಂದ ಶಯ್ನ್ ರಿಂಗ್ ಒಳಗೆ ಇದ್ದ ಕಿಶನ್‌ನನ್ನು ಕಾಲು ಹಿಡಿದು ಹೊರಗೆ ಎಳೆದುಕೊಂಡುದ್ದು ಆಟದ ನಿಯಮಕ್ಕೆ ವಿರುದ್ಧವಾಗಿತ್ತು. ಇದು ಸಾಲದು ಎಂಬಂತೆ ಬಿಗ್ ಬಾಸ್ ಅಪ್ಪಣೆ ಕೊಟ್ಟರೆಂದು ಕ್ಯಾಪ್ಟನ್ ಚಂದನ್ ಕಿಶನ್ ತಪ್ಪಿತಸ್ಥನೆಂದು ಘೋಷಣೆ ಮಾಡಿದರು. ಶಯ್ನ್ ಈ ರೀತಿ ಮಾಡಬಾರದಾಗಿತ್ತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಸಹಜತೆ ಮೀರಿದ ಕಥೆ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ' ಮನಸ್ಸನ್ನು ಸೂರೆಗೊಂಡಿದೆ. ಪೊಲೀಸ್ ಅಧಿಕಾರಿಯ ಪಾತ್ರವನ್ನು ನಿರ್ವಹಿಸುತ್ತಿರುವ ಜಾನಕಿಯ ಅದ್ಭುತವಾದ ಸಹಜಾಭಿನಯ ಮೂಕವಿಸ್ಮಿತರನ್ನಾಗಿಸುತ್ತದೆ. ಈ ವಾರದಲ್ಲಿ ಮೂಡಿಬಂದ ಚಿರಂತನನ್ನು ಬಂಧಿಸಿದ ಸಂದರ್ಭದಲ್ಲಿ ಗೃಹಮಂತ್ರಿಗಳಿಂದ ಬಂದ ಫೋನ್ ಕರೆ, ಅವರಿಬ್ಬರ ಭೇಟಿ, ಮಾತುಕತೆಗಳು, ಮುಖಭಾವ ಮನ ಮುಟ್ಟುವಂತಿದೆ. ಮಂತ್ರಿಗಳು ದುರಹಂಕಾರದಲ್ಲಿ ನುಡಿಯುವ ಮಾತುಗಳು ಜಾನಕಿಗಾದ ಅವಮಾನ, ದುಃಖ ಅದೆಷ್ಟು ಸಹಜವಾಗಿತ್ತೆಂದರೆ, ನೋಡುಗರ ಎದೆ ತುಂಬಿ ದುಃಖ ಒತ್ತರಿಸಿ ಬಂತು. ವಿಷಯವೆಲ್ಲ ತಿಳಿದು ಮಂತ್ರಿಗಳು ಅಂತರಂಗ ಬಿಚ್ಚಿಕೊಳ್ಳುವ ಹೊತ್ತು 'ಪುಟ್ಟಾ' ಎಂಬ ಪುಟ್ಟ ನುಡಿ ಅವಿಸ್ಮರಣೀಯ. ಒಟ್ಟನಲ್ಲಿ ಭಾರ್ಗಿ– ಜಾನಕಿಯರ ನಟನೆ ಸಹಜತೆಯ ಮೇರೆ ಮೀರಿತ್ತು.

—ಕಮಲಾಮೂರ್ತಿ, ನೆಲಮಂಗಲ

## ತನ್ನ ಕುತಂತ್ರಕ್ಕೆ ತಾನೇ ಬಲಿ

ಮೋಸದಿಂದ ಜಾನಕಿಯನ್ನು ಮದುವೆ ಮಾಡಿಸಿದ ಚಂದೂ ಭಾರ್ಗಿಗೆ ತನ್ನ ಮಗಳು ಚಂಚಲಾ ಕೂಡ ಒಂದು ದಿನ ಇಂತಹ ಕುತಂತ್ರಕ್ಕೆ ಸಿಲುಕಬಹುದು ಎಂದು ಕನಸಿನಲ್ಲೂ ಎಣಿಸಿರಲಿಲ್ಲವೇನೋ? ಈ ತಿರುವನ್ನು ಹಿರಿಯರು 'ಮಾಡಿದ್ದುಣ್ಣೋ ಮಹರಾಯ' ಎಂದು ಹೇಳುವುದು. ಹಾಗೆಯೇ ತನ್ನ ತನ್ನ ಬದ್ಧವೈರಿ ಸಿಎಸ್ಪಿ ಬಳಿ ಸಹಾಯ ಕೇಳಿ ಬರಬೇಕಾಗಿ ಬಂದಿರುವುದು. ತಮ್ಮ ಕೆಲಸವಾಗಬೇಕಿದ್ದರೆ ಕತ್ತೆ ಕಾಲನ್ನೂ ಹಿಡಿಯಬೇಕಾಗುತ್ತದೆ ಮತ್ತು ಅಹಂನ್ನು ಹತ್ತಿಕ್ಕಬೇಕಾಗುತ್ತದೆ ಎನ್ನುವ ಮಾತೊಂದು ಇದೆ. ಇನ್ನೊಬ್ಬರ ಕಣ್ಣೀರಲ್ಲಿ ದೈನ್ಯತೆ ಕಾಣುವ ಚಂದೂ ಭಾರ್ಗಿ, ತನ್ನ ಮಗಳ ಬದುಕು ಮೂರಾಬಟ್ಟೆಯಾಗುವುದರ ಬಗ್ಗೆ ಕಣ್ಣೀರು ಸುರಿಸಿದ್ದು, ಈ ಧಾರಾವಾಹಿಯ ರೋಚಕ ತಿರುವು.

—ರಮಾನಂದ ಶರ್ಮಾ, ದೆಹಲಿ

ಮಾದರಿ: 'ಮಗಳು ಜಾನಕಿ' ತಂದೆ ಮಗಳ ಸಂವಾದ. ಜಾನಕಿಯ ದೃಢ ನಿರ್ಧಾರ, ಕಲ್ಲು ಹೃದಯದ, ಬಿಂಕದ ಮನುಷ್ಯನ ಕಣ್ಣಲ್ಲಿ ಧಾರಾಕಾರವಾಗಿ ಕಣ್ಣೀರು ಸುರಿಸುವಂತೆ ಮಾಡಿದ ಜಾನಕಿಯ ಕರ್ತವ್ಯನಿಷ್ಠೆಯನ್ನು ಎತ್ತಿ ತೋರಿಸಿದೆ. ಜಾನಕಿ ನಿಜವಾಗಿಯೂ ಮಾದರಿ ಪೊಲೀಸ್ ಎಂದು ತೋರಿಸುತ್ತೆ.

—ಮಾಲತಿ ಪುರುಷೋತ್ತಮ್, ಬೆಂಗಳೂರು